ಪ್ರ. ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು

<u>ಸಿ.ಸಿ. ನಂ.**3363/2023.**</u>

ದಿನಾಂಕಃ**13-11-2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ಧನರಾಜ್ | ಚಾಸಾ-11<br>ಪ್ರಾಸಾ-5 |
| ತಂದೆಯ ಹೆಸರು | ಪರಮೇಶ್ವರ | |
| ವಯಸ್ಸು | 59 ವರ್ಷ | |
| ಉದ್ಯೋಗ | ಪಿ ಎಸ್ ಐ ಪಾಂಡೇಶ್ವರ ಮಹಿಳಾ ಪೊ.ಠಾಣೆ | |
| ವಾಸ | ಮಂಗಳೂರು | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ನಾನು ದಿಃ15.03.2023 ರಿಂದ ಸುಮಾರು 6 ತಿಂಗಳ ಕಾಲ ಕಡೂರು ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 18.03.2023 ರಂದು ಚಾಸಾ 1 ರವರಿಂದ ಈ ಕೇಸಿನ ಕಡತವನ್ನು ಪಡೆದುಕೊಂಡು ತನಿಖೆಯನ್ನು ಮುಂದುವರೆಸಿ, ಈ ಕೇಸಿನಲ್ಲಿ ಆರೋಪಿಯಿಂದ ವಶಪಡಿಸಿಕೊಂಡಿದ್ದ ಮದ್ಯವನ್ನು ನನ್ನ ಮುಂದೆ ಹಾಜರುಪಡಿಸಿದ್ದ ನಾನು ಸದರಿ ಮದ್ಯವನ್ನು ಮಾಲುಪಟ್ಟಿಯಲ್ಲಿ ನಮೂದು ಮಾಡಿ ಎಫ್.ಎಸ್.ಎಲ್ ವರದಿಗಾಗಿ ಚಿಕ್ಕಮಗಳೂರಿನ ಪ್ರಯೊಗಾಲಯಕ್ಕೆ ಸಿಬ್ಬಂದಿಯ ಮೂಲಕವಾಗಿ ಕಳುಹಿಸಿಕೊಟ್ಟಿರುತ್ತೇನೆ. ನಂತರ ಚಾಸಾ 4 ರಿಂದ 8 ರವರ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ. ನಂತರ ಮುಂದಿನ ತನಿಖೆಗೆಂದು ಕಡತವನ್ನು ಚಾಸಾ 12 ರವರಿಗೆ ಹಸ್ತಾಂತರಿಸಿರುತ್ತೇನೆ.

<u>ಪಾಟೀಸವಾಲುಃ ಆರೋಪಿ ಪರ ಶ್ರೀ.ಎಸ್ ಎನ್ ಎ ವಕೀಲರಿಂದ</u>

ನಾನು ಚಾಸಾ 1 ರವರಿಂದ ಯಾವುದೇ ವಸ್ತುಗಳನ್ನು ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಈ ಕೇಸಿಗೂ ಮು.ಮಾಲಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-

ಪ್ರ. ಸಿವಿಲ್ ನ್ಯಾಯಾಧೀಶರು ಮತ್ತು

ಪ್ರಃದಃನ್ಯಾಃದಂ.,ರವರು, ಕಡೂರು